# ದ್ವಿತೀಯಪಿ.ಯು.ಸಿ.ಮಾದರಿ ಪ್ರಶ್ನೆಪತ್ರಿಕೆ – 1

## ಕಡತಗೊಂಡ ಪಠ್ಯ ಕ್ರಮಕ್ಕೆ 2020–21

### ವಿಷಯ: ಐಚ್ಛಿಕ ಕನ್ನಡ–16

**ಸಮಯ:3 ಗಂಟೆ 15 ನಿಮಿಷ** **ಒಟ್ಟು ಅಂಕಗಳು: 100**

---

‘ಅ’ ವಿಭಾಗ

I.ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: 1X10=10

1. ದೇಹದ ಅನಿತ್ಯತೆಗೆಚೋದ್ಯಪಟ್ಟವರುಯಾರು?
2. ಶಿವ ಅರ್ಜುನನನ್ನು ಪರೀಕ್ಷಿಸಲುಯಾವ ವೇಷದಲ್ಲಿ ಬಂದನು?
3. ಗುಂಡಯ್ಯನಕಾಯಕಯಾವುದು?
4. ಪರುಷ ಮುಟ್ಟಲುಯಾವುದುಕನಕವಾಗುತ್ತದೆ?
5. ಇಹಪರ ಸುಖ ಯಾವುದರಿಂದ ಲಭಿಸುತ್ತದೆ?
6. ಚಂದನಕರಗಿಸಲುಏನಾಗುತ್ತದೆ?
7. ಅರುಣೋದಯ ಹೇಗೆ ಮೂಡುತ್ತಿದೆ?
8. ರೈತ ಶಿವನನ್ನು ನೋಡಲುಎಲ್ಲಿಗೆ ಹೊರಟಿದ್ದಾನೆ?
9. ಶಿವನು ಯಾರ ಬಂಧುಎನ್ನುತ್ತಾನೆ?
10. ಬೀದಿಗುಡಿಸುವ ಬಡವನೆದೆಯಲ್ಲಿಯಾರಿದ್ದಾರೆ?

‘ಆ’ ವಿಭಾಗ

II.ಕೆಳಗಿನ ಪ್ರಶ್ನೆಗಳಲ್ಲಿ ಐದಕ್ಕೆಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2X5=10

11. ಸಂಗೀತ ಪ್ರಪಂಚಕ್ಕೆಯಾವಯಾವ ವಂಶದರಾಜರು ಹಾಜರಿದ್ದರು?
12. ಮರಳ ಲಿಂಗವನ್ನುಅರ್ಜುನನು ಹೇಗೆ ಪೂಜಿಸಿದನು?
13. ಗುಂಡಯ್ಯನು ಶಿವಾಲಯದಲ್ಲಿ ಏನೇನನ್ನು ನೋಡಿದನು?
14. ಕೀಳು ಕಬ್ಬುಣಕ್ಕೂ ಮಾಯೆಗೂ ಕವಿ ಹೇಗೆ ಹೋಲಿಸಿದ್ದಾನೆ?
15. ಸೇವಕ ಜನಕೆ ಹಾಗೂ ಧರೆಗೆದೈವಯಾರು?
16. ಬಾಳ್ವೆ ಅಮೃತದಕೆನೆಯಾಗುವುದುಯಾವಾಗ?

III.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿರಿ: 3X2=6

17. ನಿಚ್ಚಂ ಮೆಚ್ಚುಗೊಳ್ವಳಿಂದ್ರನ ಕೈಯೊಳ್.
18. ಗುಂಡನ ಹೃದಯದೊಳಾಡುತ್ತಿರ್ದಂ.
19. ಕಾಮವೆತ್ತಲು ಪರಮತತ್ತ್ವದ ಸೀಮೆಯೆತ್ತಲು.
20. ಕೇರಿಯೆಲ್ಲವು ಬಳಗ.

IV.ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ವಿವರವಾಗಿ ಉತ್ತರಿಸಿರಿ: 4X4=16

21. ನೀಲಾಂಜನೆ ನೃತ್ಯವಿಶೇಷತೆಯನ್ನು ವರ್ಣಿಸಿರಿ.
22. ಗುಂಡಯ್ಯನ ಭಕ್ತಿಗೆ ಮೆಚ್ಚಿ ಶಿವ ಕುಣಿದ ಬಗೆಯನ್ನು ವರ್ಣಿಸಿ.
23. ವಿಮಳೆ ಒಡ್ಡುವ ತರ್ಕಗಳನ್ನು ಅಲ್ಲಮಪ್ರಭು ಹೇಗೆ ಸಾಧಾರವಾಗಿಖಂಡಿಸುತ್ತಾರೆ? ವಿವರಿಸಿ.
24. ಚಿಕ್ಕುಪಾಧ್ಯಾಯ ನಿರೂಪಿಸಿರುವ ದೈವ ಹಾಗೂ ವಿಶ್ವಾಸದ ಪರಿಕಲ್ಪನೆಗಳ ಬಗ್ಗೆ ವಿವರಿಸಿರಿ.
25. ಸರ್ವಜ್ಞನ ತ್ರಿಪದಿಗಳಲ್ಲಿ ತೋರುವ ಲೋಕನೀತಿಯನ್ನು ವಿವರಿಸಿ.

V.ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿರಿ: 4X1=4

26. ಒಕ್ಕುದು ನೆತ್ತರ್ ಬಾಯಿಂ
ಮಿಕ್ಕಲರ್ದುಸಿರಿಡುವ ಮೂಗಿನೆರಡುಂಕಡೆಯಿಂ
ದಕ್ಕಟತಪ್ಪಾಯ್ತೆನುತಂ

ಮುಕ್ಕಣ್ಣಂ ಮಱುಗಿ ಮನದೆ ಸಿಡಿಮಿಡಿಗೊಂಡಂ ॥

27. ಮದಕರಿಯೊಳ್ ದುಷ್ಟನಾರಿಯೊಳ್ ಪಾವಿನೊಳ್
ಪರಿವ ನದಿಯೊಳ್ ಪಾವಕನೊಳು
ನೆರೆ ಗಾವಿಲನೊಳ್ ವಿಶ್ವಾಸವಾವಗಂ
ತರಮಲ್ಲ ಶ್ರೀರಂಗಧಾಮ

'ಈ' ವಿಭಾಗ

VI.ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2X4=8

28. ಮೂಡಣ ಮತ್ತು ಪಡುವಣದಲ್ಲಿಯಾರ್ಯಾರಿದ್ದಾರೆ?
29. ಭಾರತಾಂಬೆಯದುರ್ಗತಿಗೆ ಕಾರಣಗಳೇನು?
30. ರೈತ ಶಿವನ ಗುಡಿಯಿಂದ ಏನೇನು ತಂದಿದ್ದಾನೆ?
31. ಶಿವಗುಡಿಗೆ ಶಿವನನ್ನು ಸೇರಿಸಬೇಕಾದರೆಏನೇನಿರಬೇಕು?
32. ಊರತೋಟ ಮತ್ತುಜಗದ ತೋಟಗಳಾರು?

VII.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿರಿ: 3X2=6

33. ದೂರದಲ್ಲಿಯೆ ನಿಂತುಕೈಮುಗಿದು ಬಾ.
34. ಅಂಜದಿರು, ಸೋದರನೆ ನಾನಿನ್ನ ಬಂಧು!
35. ಬೀದಿಗುಡಿಸುವ ಬಡವನೆದೆಯಲ್ಲಿ ನಾನಿರುವೆ

VIII.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ವಿವರವಾಗಿ ಉತ್ತರಿಸಿರಿ: 4X2=8

36. ಭೂದೇವಿಯಉಷಃಕಾಲದಚಿತ್ರಣವನ್ನು ಚಿತ್ರಿಸಿ.
37. ಬಡವರಿಗೆ ಬಡವರಲ್ಲದೆ ಬೇರೆಗತಿಯುಂಟೆ? ಈ ಮಾತಿನಅರ್ಥವೇನು ವಿವರಿಸಿರಿ.
38. ಶಿವ ಎಲ್ಲಿದ್ದಾನೆಎಂದುಜಲಗಾರ ಹೇಳುತ್ತಾನೆ? ವಿವರಿಸಿ.

IX.ಕೆಳಗಿನ ಎರಡಕ್ಕೆಟಿಪ್ಪಣಿ ಬರೆಯಿರಿ: 2X2=4

39. ಷಡಕ್ಷರದೇವ.
40. ಶತಕ ಶಾಹಿತ್ಯ.
41. ವಿಮಳೆ.

X.ಕೆಳಗಿನವುಗಳಲ್ಲಿ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ: 2X6=12

42. ಯಾವುದಾದರೂಎರಡು ಪದಗಳ ಅರ್ಥ ಬರೆಯಿರಿ:
ಅವನಿ, ಬೆಸಸು, ಆನನ.
43. ಯಾವುದಾದರೂಎರಡು ಪದಗಳ ಸಮಾನಾರ್ಥ ಬರೆಯಿರಿ:
ಮಿತ್ರ, ಬಾನು, ಕಾಯಕ.
44. ಯಾವುದಾದರೂಎರಡು ಪದಗಳನ್ನು ವಾಕ್ಯಗಳಲ್ಲಿ ಬಳಸಿರಿ:
ಕಂಗೊಳಿಸು, ಅಲ್ಲಗಳೆ, ಸಂತವಿಸು,
45. ಯಾವುದಾದರೂಎರಡು ಪದಗಳ ನಾನಾರ್ಥ ಬರೆಯಿರಿ:
ಅರಸು, ಎಡೆ, ಹರಿ.
46. ಯಾವುದಾದರೂಎರಡು ಪದಗಳ ತತ್ಸಮ–ತದ್ಭವಗಳನ್ನು ಬರೆಯಿರಿ:
ಕಪ್ಪುರ, ಬಿಜ್ಜೆ, ವನ.
47. ಯಾವುದಾದರೂಎರಡು ಪದಗಳನ್ನು ಬಿಡಿಸಿ ಬರೆಯಿರಿ:
ಕಡುಗಲಿ, ಗುಣಾಭರಣ, ಮೈದೋರು.
48. ಯಾವುದಾದರೂಎರಡು ಪದಗಳ ವಿರುದ್ಧಾರ್ಥಕಗಳನ್ನು ಬರೆಯಿರಿ:
ಸುಖ, ಸತ್ಯ, ಸುರ.

ಉ' ವಿಭಾಗ

XI.ಕೆಳಗೆ ಕೊಟ್ಟಿರುವಎರಡಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸಿನ ಹೆಸರನ್ನು ಬರೆಯಿರಿ: 4X2=8

49. ನಾರೀರೂಪದಯಂತ್ರಂ
 ಚಾರುತರಂ ನೋಡೆ ನೋಡೆಕರಗಿದುದೀ ಸಂ
 ಸಾರದನಿತ್ಯತೆ ಮನದೊಳ್
 ಬೇರೂಜಿದುದೀಗಳೆಂತಿದಂ ಕಡೆಗಣಿಪೆಂ

50. ಮಡಕೆಯದನಿಯಾವುಜದ ಸುನಾದಂ
 ಮಡಕೆಯದನಿ ಪೊಸ ಕಹಳೆಯ ನಾದಂ

51. ಚಂದನವಕರಗಿಸಲು ಬೆಂದು ಪರಿಮಳವಕ್ಕು
 ಸಂದರಿವನರಿದು ಸತ್ಪುರುಷರೆನಿಸಿಹರು
 ನೊಂದು ಸೈರಿಪರು ಸರ್ವಜ್ಞ

XII.ಕೆಳಗೆ ಕೊಟ್ಟಿರುವಒಂದಕ್ಕೆಅಲಂಕಾರ ಹೆಸರಿಸಿ, ಸಮನ್ವಯಿಸಿ ಬರೆಯಿರಿ: 4X1=4

52. 'ಸೀತೆಯ ಮುಖ ಕಮಲದಂತೆ ಅರಳಿತು'.

53. 'ಮೂಡಣದ ಬಾನಿನೆಡೆಯಲಿ ಓಕುಳಿಯನ್ನು ಚೆಲ್ಲುತ್ತಾಅರುಣೋದಯವು ಮೂಡುತ್ತಿತ್ತು'.

XIII.ಕೆಳಗೆ ಕೊಟ್ಟಿರುವ ಹಳಗನ್ನಡವನ್ನು ಹೊಸಗನ್ನಡಕ್ಕೆ ಅನುವಾದಿಸಿರಿ: 4X1=4

54. ಪರಮಶಿವಾಗಮೋಕ್ತವಿಧಿಯಿಂ ಮಣಲಿಂ ನೆಗೆಟ್ದೊಂದು ಲಿಂಗಮಂನಿರುಪಮಭಕ್ತಿಯಿಂ ತಿಜಿದು ಪಡ್ಡಳಿ ಬಂದುಗೆ ಕಕ್ಕೆ ಮುತ್ತ ಪಾದರಿಗಳ ಪೂಗಳಂ ಮೃದುಳಬಿಲ್ವದಳಂಗಳನಲ್ಲಿ ತಂದು ಶಂಕರನನೊಜಿಲ್ದು ಪೂಜಿಸಿದನರ್ಥಿತವೈರಿಜಯಂ ಧನಂಜಯಂ॥

# ದ್ವಿತೀಯಪಿ.ಯು.ಸಿ.ಮಾದರಿ ಪ್ರಶ್ನೆಪತ್ರಿಕೆ – 2,
# ಕಡತಗೊಂಡ ಪಠ್ಯ ಕ್ರಮಕ್ಕೆ 2020–21
# ವಿಷಯ: ಐಚ್ಛಿಕ ಕನ್ನಡ–16

**ಸಮಯ:3 ಗಂಟೆ 15 ನಿಮಿಷ** **ಒಟ್ಟು ಅಂಕಗಳು: 100**

‘ಅ’ ವಿಭಾಗ

I.ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: 1X10=10

1. ಅಸಮ ಪ್ರೇಕ್ಷಕರುಎಲ್ಲಿ ಕುಳಿತಿದ್ದರು?
2. ಯಾರ ಬಾಣದಿಂದ ಹಂದಿಯು ನೆಲಕ್ಕೆ ಉರುಳಿತು?
3. ಶಿವನು ಯಾರಜೊತೆಕುಣಿದನು?
4. ಲೋಗರಿಗೆ ಪ್ರತಿಶಬ್ಧ ಹೇಗೆ ತೋರುತ್ತದೆ?
5. ವಿದ್ಯಾರ್ಥಿಗೆಯಾರುದೈವ?
6. ನಾಲಿಗೆ ಇಲ್ಲದಲೆಉಲಿಯುವುದುಯಾವುದು?
7. ಮಣ್ಣಿನ ಭೋಗಿಯಾರು?
8. ಕಿಲ್ಲೋನೆ ಹೇಗೆ ಸುರಿಯುತ್ತಿತ್ತು?
9. ಜನಕೆಯಾವುದರ ಮಂಕು ಬಡಿದಿದೆ?
10. ಬಡವರಿಗೆಯಾರುಗತಿ?

‘ಆ’ ವಿಭಾಗ

II.ಕೆಳಗಿನ ಪ್ರಶ್ನೆಗಳಲ್ಲಿ ಐದಕ್ಕೆಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2X5=10

11. ಸುರವಧುವಿನ ನೃತ್ಯವನ್ನು ನೋಡುತ್ತಿದ್ದ ರಾಜರುಗಳ ಮನಸ್ಥಿತಿ ಹೇಗಿತ್ತು?
12. ಕೋಪಗೊಂಡ ಶಿವನು ಅರ್ಜುನನನ್ನು ತುಳಿದಾಗ ಏನಾಯಿತು?
13. ಮಡಕೆಗಳನ್ನು ಮಾಡುವಾಗಗುಂಡಯ್ಯನಿಗೆಯಾವುದರೆಡೆಗೆ ಲಕ್ಷ್ಯವಿರಲಿಲ್ಲ?
14. ಆನೆ ಹಾಗೂ ಕುರಿಗಳು ಕಬ್ಬನ್ನು ಮೆಲುವ ಪರಿ ಹೇಗೆ?
15. ಚಿಕ್ಕುಪಾಧ್ಯಾಯರುಕನ್ನಡ ಭಾಷೆಯ ಬಗ್ಗೆ ಏನೆಂದು ಹೇಳಿದ್ದಾರೆ?
16. ಉದ್ದರಿಯಕೊಟ್ಟವನುಏನೇನಾದನು?

III.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿರಿ: 3X2=6

17. ಸುರಕಾಮಿನಿ ರಂಗದೊಳ್ ಅದೃಶ್ಯಮಪ್ಪುದು.
18. ಮುಡಿಯೊಳು ಸುರನದಿ ತುಳ್ಕಾಡುತ್ತಿರೆ.
19. ಕಬ್ಬುನವಾದಡೆ ಪರುಷ ಮುಟ್ಟಲುಕನಕವಹುದು.
20. ಹಂದಿಯೊಂದೆಡೆಗೆಉಪಕಾರ.

IV.ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ವಿವರವಾಗಿ ಉತ್ತರಿಸಿರಿ: 4X4=16

21. ಯಂತ್ರನಾರಿ ಪ್ರಸಂಗದ ಸೊಗಸನ್ನು ವಿವರಿಸಿರಿ.
22. ಗುಂಡಯ್ಯನ ಭಕ್ತಿಗೆ ಶಿವನು ಒಲಿದ ಬಗೆಯನ್ನು ವಿವರಿಸಿರಿ.
23. ಆಸೆ–ಆಮಿಷಗಳನ್ನು ವಿವೇಕಯುತವಾಗಿ ಹೇಗೆ ಎದುರಿಸಬೇಕೆಂಬುದನ್ನು ಪ್ರಸ್ತುತಚಾಮರಸನ ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿರಿ.
24. ಚಿಕ್ಕುಪಾಧ್ಯಾಯನು ಶತಕಗಳಲ್ಲಿ ಬೋಧಿಸಿದ ಬದುಕಿನ ಮೌಲ್ಯಗಳನ್ನು ಸಂಗ್ರಹಿಸಿ ವಿವರಿಸಿರಿ.
25. ಸರ್ವಜ್ಞನತ್ರಿಪದಿಗಳಲ್ಲಿ ಕಂಡುಬರುವ ಸಾರ್ವಕಾಲಿಕ ಮೌಲ್ಯಗಳನ್ನು ಸಂಗ್ರಹಿಸಿ ಬರೆಯಿರಿ.

V.ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿರಿ: 4X1=4

26. ಕೆಡೆಕೆಡೆಯೆಂದಾರ್ದೆಚ್ಚಂ
ಘುಡುಘುಡಿಪ ಮಹಾವರಾಹನಂಕೂರ್ಗಣೆಯಿಂ
ಕಡುಗಲಿ ಪಾರ್ಥಂ ನೆಱೆನಂ

ನಡೆಗೋಣಡಿಗೊಂಡು ಪಂದಿ ಕೆಡೆದತ್ತಾಗಳ್

27. ಮೃದುನುಡಿ ಮನುಜರ ಹೃದಯಾಕರುಷಣ
ಮೃದುನುಡಿಇಹಪರ ಸೌಖ್ಯ
ಮೃದುನುಡಿಯಿಂ ಲೋಕಪೂಜ್ಯತೆರಂಗೇಶ
ಮೃದುನುಡಿಗೆಣೆಯದಿನ್ನುಂಟೆ

'ಈ' ವಿಭಾಗ

VI.ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2X4=8

28. ರೈತನ ಗೆಳೆಯರು ಯಾರು?
29. ಜಲಗಾರನ ಶಿವ ಎಲ್ಲಿದ್ದಾನೆ?
30. ಗುಡಿಗಳು ಯಾರ ಗೂಡುಗಳು ಎಂದುತಿರುಕ ಹೇಳುತ್ತಾನೆ?
31. ಧರೆಗೆಎಲ್ಲಿಯವರೆಗೆ ಸುಖವಿಲ್ಲ?
32. ಜಲಗಾರಯಾವುದನ್ನುಒಲ್ಲೆಎನ್ನುತ್ತಾನೆ?

VII.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿರಿ: 3X2=6

33. ಒಂದು ದಿನವಾದರೂ ವಿಶ್ರಾಂತಿಇರಲಿ.
34. ಹುಟ್ಟುಗುಣ ಸುಟ್ಟರೂ ಹೋಗುವುದೆ?
35. ಗುಡಿಗಳು ಪಾಪಿಗಳ ಭೋಗಿಗಳ ಗೂಡುಗಳು!

VIII.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ವಿವರವಾಗಿ ಉತ್ತರಿಸಿರಿ: 4X2=8

36. ನೇಗಿಲ ಯೋಗಿಗೆ ಮುಕ್ತಿ ತೋರುವ ಹಾದಿ ಯಾವುದು? ವಿವರಿಸಿರಿ.
37. ಶಿವನ ಆಭರಣಗಳು ಯಾವುವು? ವಿವರವಾಗಿ ಬರೆಯಿರಿ.
38. ಕಾಯಕತತ್ತ್ವದ ಮಹತ್ವವನ್ನುಜಲಗಾರ ನಾಟಕದ ಹಿನ್ನೆಲೆಯಲ್ಲಿ ಬರೆಯಿರಿ.

IX.ಕೆಳಗಿನ ಎರಡಕ್ಕೆಟಿಪ್ಪಣಿ ಬರೆಯಿರಿ: 2X2=4

39. ಚಂಪೂ ಸಾಹಿತ್ಯ
40. ಗುಂಡಯ್ಯ
41. ಸರ್ವಜ್ಞ

X.ಕೆಳಗಿನವುಗಳಲ್ಲಿ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ: 2X6=12

42. ಯಾವುದಾದರೂಎರಡು ಪದಗಳ ಅರ್ಥ ಬರೆಯಿರಿ:
ಪುಗಿಲ್, ನಿಟಿಲಾಕ್ಷ, ಕಾದು.
43. ಯಾವುದಾದರೂಎರಡು ಪದಗಳ ಸಮಾನಾರ್ಥ ಬರೆಯಿರಿ:
ಅಗ್ನಿ, ಸೋಮ, ನೆತ್ತರು.
44. ಯಾವುದಾದರೂಎರಡು ಪದಗಳನ್ನು ವಾಕ್ಯಗಳಲ್ಲಿ ಬಳಸಿರಿ:
ನಿರ್ಮೂಲ, ತಲೆಗೇರು, ಮನಕರಗು.
45. ಯಾವುದಾದರೂಎರಡು ಪದಗಳ ನಾನಾರ್ಥ ಬರೆಯಿರಿ:
ಆಡು, ನೆರೆ, ಮಣಿ.
46. ಯಾವುದಾದರೂಎರಡು ಪದಗಳ ತತ್ಸಮ–ತದ್ಭವಗಳನ್ನು ಬರೆಯಿರಿ:
ಜನ್ಮ, ಯಮ, ಹರಣ.
47. ಯಾವುದಾದರೂಎರಡು ಪದಗಳನ್ನು ಬಿಡಿಸಿ ಬರೆಯಿರಿ:
ಕೀಳುಗಬ್ಬನ.ಅರುಣೋದಯ, ಕೃಪಾವಲೋಕನ.
48. ಯಾವುದಾದರೂಎರಡು ಪದಗಳ ವಿರುದ್ಧಾರ್ಥಕಗಳನ್ನು ಬರೆಯಿರಿ:
ಧರ್ಮ, ಹೊರಗಣ, ನೀತಿ.

ಉ' ವಿಭಾಗ

XI.ಕೆಳಗೆ ಕೊಟ್ಟಿರುವಎರಡಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸಿನ ಹೆಸರನ್ನು ಬರೆಯಿರಿ: 4X2=8

49. ಎನಿತೊಡಲಂ ತಾಳ್ದಿದುದಿ
ಲ್ಲೆನಿತೊಡಲಂ ಬಿಸುಟುದಿಲ್ಲ ವಿಷಯಾನಳನಿಂ
ದೆನಿತೆನಿತಂ ಮಱುಗಿದುದಿ
ಲ್ಲನಂತಸಂಸಾರಗಹನದೊಳ್ ಜೀವಂಗಳ್

50. ಒಂದು ಪದಂ ಪಾತಾಳವನೊತ್ತಲು
ಒಂದು ಪದಂ ಬ್ರಹ್ಮಾಂಡವನೆತ್ತಲು

51. ಲೋಭದಿಂಕೌರವನು ಲಾಭವನು ಪಡೆದಿಹನೆ?
ನಾಭಿಯಿಂ ಕೆಳಗೆ ಎರಡೂರ ಕೊಂಬಾಗ
ಲಾಭ ಬಂದಿಹುದೆ ಸರ್ವಜ್ಞ

XII.ಕೆಳಗೆ ಕೊಟ್ಟಿರುವಒಂದಕ್ಕೆಅಲಂಕಾರ ಹೆಸರಿಸಿ, ಸಮನ್ವಯಿಸಿ ಬರೆಯಿರಿ: 4X1=4

52. 'ಸೀತೆಯ ಮುಖ ಕಮಲ ಅರಳಿತು'.

53. 'ಯುದ್ಧವನ್ನು ನೋಡಲು ದಿನಪನುದಿಸಿಬಂದ'.

XIII.ಕೆಳಗೆ ಕೊಟ್ಟಿರುವ ಹಳಗನ್ನಡವನ್ನು ಹೊಸಗನ್ನಡಕ್ಕೆ ಅನುವಾದಿಸಿರಿ: 4X1=4

54. ವನ್ಯಕಿರಾತನೆಂದು ಬಗೆದೆಚ್ಚೆನಿದಿರ್ಚಿದೆನಜ್ಞಭಾವದಿಂಜನ್ಮಮನಾಂತು ನಿಂದು ಮಿಗೆ ಮೆಯ್ವೋಣರ್ದೆಂ ಮದನುಗ್ರಹಾರ್ಥಮೀ
ಮಾನ್ಯಮಹೇಶ್ವರಂ ಮಱೆಯೊಳೆಯ್ದಿದುದಂ ತಿಳಿದಾತನಲ್ತು ಸೌಜನ್ಯವಿದೂರನಾದೆನಕಟೆನ್ನವೊಲಾವನೊ ಗಾಂಪನುರ್ವಿಯೊಳ್.॥